## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಮತ್ತು ಇತರೆ 12 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ಮುಖ್ಯ ಅಭಿಯಂತರರು, ಗ್ರಾ.ಕು.ನೀ&ನೈ.ಇಲಾಖೆರವರ ಕಡತ ಸಂ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/428/2021-22

---

**ಪೀಠಿಕೆ:**

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಮತ್ತು ಇತರೆ 12 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಗೆ 2021-22ನೇ ಸಾಲಿನ ರಾಜ್ಯ ಮಟ್ಟದ 4215 ಕ್ರಿಯಾ ಯೋಜನೆಯಲ್ಲಿ 40 LPCD ಸೇವಾ ಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅನುಮೋದನೆ ನೀಡಲಾಗಿದೆ.

ಈ ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದ **ರೂ.852.00ಲಕ್ಷ** ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರುರವರು ಮೇಲೆ ಓದಲಾದ ಕಡತದಲ್ಲಿ ಕೋರಿರುತ್ತಾರೆ. ಚಾಲ್ತಿ ಪಾರದರ್ಶಕ ನೀತಿಯನ್ವಯ, ನಿಯಮಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬೆಳಗಾವಿ** ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಸದರಿ ಕಾಮಗಾರಿಗೆ **4215-MVS(ಓ&ಎಂ)** ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ/24/ಗ್ರಾನೀಸ(4)2022 ಬೆಂಗಳೂರು, ದಿನಾಂಕ:13.01.2022** 100

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಮತ್ತು ಇತರೆ 12 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಗೆ **ವಿದ್ಯುತ್ ವೆಚ್ಚ ಸೇರಿದಂತೆ** ಒಟ್ಟು ಅಂದಾಜು ಮೊತ್ತ **ರೂ.852.00ಲಕ್ಷ (ಎಂಟು ನೂರ ಐವತ್ತೆರಡು ಲಕ್ಷ ರೂಪಾಯಿಗಳು ಮಾತ್ರ)ಗಳಿಗೆ 4215-MVS(ಓ&ಎಂ)** ಕಾರ್ಯಕ್ರಮದ ಅಡಿಯಲ್ಲಿ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. **ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

(ಅ) ನಿರ್ವಹಣೆಯ ಗುತ್ತಿಗೆಯನ್ನು ವಹಿಸಲಾಗುವ ಸಂಸ್ಥೆಯೇ 5 ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸತಕ್ಕದ್ದು.

(ಆ) ಪ್ರಸ್ತಾಪಿತ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಅವಶ್ಯವಿರುವ ಅನುಮೋದನೆ ಪಡೆದು ನಂತರ ಮುಂದಿನ ಕ್ರಮ ವಹಿಸತಕ್ಕದ್ದು. ಅನುಮೋದನೆ ನೀಡಲಾದ ಅಂದಾಜಿನ ವ್ಯಾಪ್ತಿಯೊಳಗೆ ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು. ಅಂದಾಜು ಮೊತ್ತದಲ್ಲಿ ಯಾವುದೇ ರೀತಿಯ ಹೆಚ್ಚಳಕ್ಕೆ ಆಸ್ಪದ ನೀಡಬಾರದು.

(ಇ) ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಮುಖ್ಯ ಅಭಿಯಂತರರು, ಗ್ರಾ.ಕು.ನೀ&ನೈ. ಇಲಾಖೆ, ಬೆಂಗಳೂರುರವರು ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.

(ಈ) ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು IMISನಲ್ಲಿ ದಾಖಲಿಸತಕ್ಕದ್ದು.

(ಉ) ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್ ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್ ಠರಾವಿನನ್ವಯ ಸಂಗ್ರಹಿಸುವುದು.

(ಊ) ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2021-22ನೇ ಸಾಲಿನಿಂದ ಮುಂದಿನ 5 ವರ್ಷದವರೆಗೆ ಪರಿಗಣಿಸತಕ್ಕದ್ದು.

(ಋ) 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಮೊದಲನೆಯ ವರ್ಷದ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡುವುದು. ಅದರಂತೆ ಮೊದಲನೆಯ ವರ್ಷದ ಮೊತ್ತಕ್ಕೆ ಟೆಂಡರ್ ಆಹ್ವಾನಿಸಿ, ಗುತ್ತಿಗೆದಾರರ ತೃಪ್ತಿಕರ ನಿರ್ವಹಣೆ ಪರಿಗಣಿಸಿ 5 ವರ್ಷದ ಅವಧಿಗೆ ಪ್ರತಿ ವರ್ಷ ಶೇ.5ರ ಹೆಚ್ಚಳದೊಂದಿಗೆ ಗುತ್ತಿಗೆಯನ್ನು ಮುಂದುವರೆಸುವ ಅಂಶಗಳನ್ನು ಅಳವಡಿಸಿಕೊಂಡು KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.

(ಎ) ಸದರಿ ಯೋಜನೆಯನ್ನು JJM ಮಾರ್ಗಸೂಚಿಯನ್ವಯ 40 LPCDಗೆ ವೃದ್ಧಿಸಿ, ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ಅನುಮೋದನೆ ಪಡೆದು ನಿಯಮಾನುಸಾರ ಕ್ರಮ ವಹಿಸತಕ್ಕದ್ದು. ಕಾಮಗಾರಿಯ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಹಾಗೂ ನೀರು ಪೂರೈಕೆಯ ನಿರಂತರತೆಯ ಜೊತೆಗೆ Augmentation ಕಾಮಗಾರಿಯನ್ನು ಸಮಾನಾಂತರವಾಗಿ ಕೈಗೊಳ್ಳತಕ್ಕದ್ದು.

(ಏ) ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ:4215-01-102-2-01 ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ (ಅಭಿವೃದ್ಧಿ),
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಬೆಳಗಾವಿ.**
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ. &. ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
7. ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
8. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಬೆಳಗಾವಿ.**
10. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಳಗಾವಿ.**
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. &. ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ, "ಕರ್ನಾಟಕ ವಿಕಾಸ", ಗ್ರಾ.ಅ.&ಪಂ.ರಾಜ್ ಇಲಾಖೆ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&ನೈ.ಇ., ಕಾವೇರಿ ಭವನ, ಬೆಂಗಳೂರು.
14. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಬೆಳಗಾವಿ.**
15. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. &. ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು). ಬಹುಮಹಡಿ ಕಟ್ಟಡ, ಬೆಂಗಳೂರು.
16. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ), ಬೆಂಗಳೂರು.
17. ಗ್ರಾ.ಅ. &. ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು), ಬಹುಮಹಡಿ ಕಟ್ಟಡ, ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಗ್ರಾಕುನೀಸ ಇ/24/ಗ್ರಾನೀಸ(4)/2022 ದಿ.13.01.2022 ರ ಅನುಬಂಧ

PROVIDING OPERATION AND MAINTENANCE TO KITTUR AND 12 OTHER VILLAGES IN BAILHONGAL TALUKA IN

| Sl No | Item of Work | Amount in Rs. |
|---|---|---|
| | PART-A ENERGY CHARGES | |
| 1 | Ist year Energy charges | 7745629.85 |
| 2 | IInd year Energy charges | 8132911.34 |
| 3 | IIIrd year Energy charges | 8539556.91 |
| 4 | IVth year Energy charges | 8966534.75 |
| 5 | Vth year Energy charges | 9414861.49 |
| | Sub Total (A) | 42799494.34 |
| | PART-B OPERTION AND MAINTENANCE | |
| 1 | Ist year operation & maintenance charges Excluding energy charges | 4592909.03 |
| 2 | IInd year operation & maintenance charges Excluding energy charges | 4822554.48 |
| 3 | IIIrd year operation & maintenance charges Excluding energy charges | 5063682.21 |
| 4 | IVth year operation & maintenance charges Excluding energy charges | 5316866.32 |
| 5 | Vth year operation & maintenance charges Excluding energy charges | 5582709.63 |
| | Sub Total (B) | 25378721.67 |
| | PART-C SPECIAL REPAIRS | |
| 1 | Raw water pumping machinery: JACK WELL to WTP | |
| 2 | Replacement of Starter at Pure water pumping machinery | |
| 3 | Gravity main replacement | |
| | Sub Total (C) | |
| | ADD for GST @ 9 % on Electric charges only | 3573365.07 |
| | ADD for GST @ 12 % on Part B & C | 3045446.60 |
| | PREPERATION OF DRP CHARGES & CONTENGENCIES | 215796.82 |
| | Grand Total in Rs | 85200000.00 |

Cost per Kilo ltr.Excluding energy charges
Cost per Kilo ltr.including energy charges

Assistant Executive Engineer
RDW & S Sub division Bailhongal

"ಅನುಮೋದಿಸಿದೆ"

ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ, ಬೆಂಗಳೂರು.

Executive Engineer
RDW & S Division Belagavi